KACM210003462020

**<u>1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಕಡೂರು.</u>**

**ದಿನಾಂಕ 1 ನೇ ಜುಲೈ ಮಾಹೆ 2026**

**:: ಉಪಸ್ಥಿತರು ::**

**ಶ್ರೀ ಮಂಜುನಾಥಚಾರಿ ಡಿ.ಕೆ.,**

**ಬಿ.ಎ., ಎಲ್.ಎಲ್.ಬಿ.**

**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಕಡೂರು.**

**ಅಸಲು ದಾವಾ ಸಂಖ್ಯೆ: 139/2020**

**ವಾದಿಗಳು** : 1. ಶ್ರೀಮತಿ. ಬಿ.ವನಜಾಕ್ಷಿ ಕೋಂ ಜಗದೀಶ್,
ಸುಮಾರು 45 ವರ್ಷ, ವ್ಯಾಪಾರ,
ವಾಸಃ ಬಾಳೇಹಳ್ಳಿ ಗ್ರಾಮ, ಜ್ಯೋತಿ ನಗರ ಅಂಚೆ,
ಚಿಕ್ಕಮಗಳೂರು ತಾಲ್ಲೂಕು ಮತ್ತು ಜಿಲ್ಲೆ.

2. ಜಗದೀಶ ಬಿನ್ ಗಂಗೇಗೌಡ,
ಸುಮಾರು 55 ವರ್ಷ, ವ್ಯಾಪಾರ,
ವಾಸಃ ಬಾಳೇಹಳ್ಳಿ ಗ್ರಾಮ, ಜ್ಯೋತಿ ನಗರ ಅಂಚೆ,
ಚಿಕ್ಕಮಗಳೂರು ತಾಲ್ಲೂಕು ಮತ್ತು ಜಿಲ್ಲೆ.

**(ವಾದಿಯ ಪರವಾಗಿ : ಶ್ರೀ ಸಿ.ಕೆ.ಜೆ/ಎ.ಎಂ.ಆರ್. ವಕೀಲರು)**

**– ವಿರುದ್ಧ –**

KACM210003462020

**ಪ್ರತಿವಾದಿ** : ಶ್ರೀಮತಿ.ಪಾರ್ವತಮ್ಮ
ಕೋಂ ಲೇಟ್ ಬಿ.ಎನ್.ಬಸವರಾಜು,
ಸುಮಾರು 62 ವರ್ಷ, ವ್ಯವಸಾಯ,
ವಾಸಃ ಶಿಶುವಿಹಾರ ಬೀದಿ, ಅರೆಕಲ್
ನರ್ಸಿಂಗ್ ಹೋಂ ಪಕ್ಕ, ಬೀರೂರು ಹೋಬಳಿ,
ಕಡೂರು ತಾಲ್ಲೂಕು.
**(ಪ್ರತಿವಾದಿಗಳ ಪರವಾಗಿ : ಶ್ರೀ ಜಿ.ಎನ್.ವಿ. ವಕೀಲರು)**

| | | |
|---|---|---|
| ದಾವಾ ಹೂಡಿದ ದಿನಾಂಕ | :: | 18.02.2020 |
| ದಾವಾ ಸ್ವರೂಪ | :: | ಕರಾರಿನ ನಿರ್ಧಿಷ್ಟ ನೆರವೇರಿಕೆ ಕೋರಿ |
| ಸಾಕ್ಷ್ಯ ಪ್ರಾರಂಭಿಸಿದ ದಿನಾಂಕ | :: | 18.07.2023 |
| ತೀರ್ಪಿನ ದಿನಾಂಕ | :: | 01.07.2026 |
| ತೀರ್ಪು ನೀಡಲು ತೆಗೆದುಕೊಂಡ ಒಟ್ಟು ಸಮಯ | :: | ದಿನಗಳು ತಿಂಗಳು ವರ್ಷಗಳು<br>14 04 06 |

Sd/-

**(ಮಂಜುನಾಥಚಾರಿ ಡಿ. ಕೆ.)**
1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ನ್ಯಾಯಾಲಯ, ಕಡೂರು.

**:: ತೀರ್ಪು ::**

ವಾದಿಯು ಈ ದಾವೆಯನ್ನು ದಾವಾ ಸ್ವತ್ತಿನ ಸಂಬಂಧವಾಗಿ ಕರಾರಿನ ನಿರ್ಧಿಷ್ಟ ನೆರವೇರಿಕೆ ಹಾಗೂ ಇತರ ಪರಿಹಾರಗಳನ್ನು ಕೋರಿ ಸಲ್ಲಿಸಿರುತ್ತಾರೆ.

KACM210003462020

2. **ದಾವೆಯ ಸಂಕ್ಷಿಪ್ತ ಸಾರಾಂಶ ಈ ಕೆಳಕಂಡಂತಿದೆಃ-**

ವಾದಿಗಳು ಸಲ್ಲಿಸಿರುವ ದಾವೆ ಏನೆಂದರೆ, ಕಡೂರು ತಾಲ್ಲೂಕು, ಬೀರೂರು ಹೋಬಳಿ, ಬಳ್ಳಿಗನೂರು ಗ್ರಾಮದ ಸ.ನಂ.34/3 ಪಿ, ವಿಸ್ತೀರ್ಣ 2.08 ಎಕರೆ ದಾವಾ ಸ್ವತ್ತು ಪ್ರತಿವಾದಿಗೆ ಪೌತಿ ವಾರಸು ಮೂಲಕ ಬಂದಿರುವ ಸ್ವತ್ತಾಗಿರುತ್ತದೆ. ವಾದಿಯು ಪ್ರತಿವಾದಿಯ ಮಗಳಾಗಿದ್ದು, ದಾವಾ ಸ್ವತ್ತಿನ ಮೇಲೆ ವಾದಿಗೆ ಕಾನೂನುಬದ್ಧ ಹಿತಾಸಕ್ತಿ ಇರುತ್ತದೆ. ಪ್ರತಿವಾದಿಗೆ ವಾದಿಯಲ್ಲದೆ ರಾಜಕುಮಾರ ಮತ್ತು ಮಹೇಂದ್ರ ಎನ್ನುವ ಮಕ್ಕಳಿರುತ್ತಾರೆ. ಪ್ರತಿವಾದಿಯು ದಾವಾ ಸರ್ವೆ ನಂಬರಿನ ಪೈಕಿ 0.27 ಗುಂಟೆ ವಿಸ್ತೀರ್ಣಕ್ಕೆ ಪ್ರತ್ಯೇಕ ಸ್ವಾಧೀನವನ್ನು ಹೊಂದಿರುತ್ತಾರೆ. ದಿನಾಂಕ 04.07.2007 ರಲ್ಲಿ ಪ್ರತಿವಾದಿಯು ವಾದಿಯಿಂದ ರೂ.1,58,000/- ಗಳನ್ನು ಸಾಲದ ರೂಪದಲ್ಲಿ ಪಡೆದುಕೊಂಡಿದ್ದು, ಸದರಿ ಸಾಲವನ್ನು ಮರುಪಾವತಿಸಲು ಸಾಧ್ಯವಾಗದ ಕಾರಣ ವಾದಿಯು ಪಟ್ಟಣ ಸಹಕಾರ ನಿಯಮಿತ ಬ್ಯಾಂಕ್, ಚಿಕ್ಕಮಗಳೂರು ಬ್ಯಾಂಕಿನಲ್ಲಿ ಮಾಡಿರುವ ಸಾಲದ ಹಣವನ್ನು 10 ವರ್ಷಗಳಲ್ಲಿ ಮಾಸಿಕ ಕಂತು ಮತ್ತು ಬಡ್ಡಿಯೊಂದಿಗೆ ಪ್ರತಿವಾದಿಯು ತನ್ನ ಖಾತೆಯಿರುವ ಡಿ.ಸಿ.ಸಿ ಬ್ಯಾಂಕ್, ಬೀರೂರು ಶಾಖೆಯ ಮೂಲಕ ಪಾವತಿಸಲು ಒಪ್ಪಿಕೊಂಡಿರುತ್ತಾರೆ. ಅದರಂತೆ ದಿನಾಂಕ 04.07.2007 ರಂದು ರೂ.1,58,000/- ಗಳಿಗೆ ಒಂದು ಸಾಲ ತೀರುವಳಿ ಹಾಗೂ ಕ್ರಯ ಒಪ್ಪಂದ ಕರಾರು ಪತ್ರವನ್ನು ಸಾಕ್ಷಿದಾರರ ಸಮಕ್ಷಮ

ಬರೆದುಕೊಟ್ಟಿರುತ್ತಾರೆ. ಆದರೆ ಪ್ರತಿವಾದಿಯು ಸದರಿ ತೀರುವಳಿ ಪತ್ರ ಹಾಗೂ ಕ್ರಯ ಒಪ್ಪಂದ ಕರಾರು ಪತ್ರದಂತೆ ಹಣವನ್ನು ಬ್ಯಾಂಕಿಗೆ ಮರುಪಾವತಿ ಮಾಡದ ಕಾರಣ ದಿನಾಂಕ 09.07.2018 ರಂದು ವಾದಿಯು ತನ್ನ ವಕೀಲರ ಮೂಲಕ ಪ್ರತಿವಾದಿಗೆ ತಿಳುವಳಿಕೆ ಪತ್ರವನ್ನು ಹೊರಡಿಸಿರುತ್ತಾರೆ. ಆದರೂ ಸಹ ಪ್ರತಿವಾದಿಯು ಸಾಲದ ಹಣವನ್ನು ಮರುಪಾವತಿ ಮಾಡಿರುವುದಿಲ್ಲ. ಆದುದರಿಂದಾಗಿ ದಿನಾಂಕ 04.07.2007 ರ ಸಾಲದ ಹಣದ ತೀರುವಳಿ ಹಾಗೂ ಕ್ರಯ ಒಪ್ಪಂದ ಕರಾರು ಪತ್ರದ ಕರಾರಿನ ನಿರ್ದಿಷ್ಟ ನೆರವೇರಿಕೆ ಕೋರಿ ವಾದಿಯು ಈ ದಾವೆಯನ್ನು ಸಲ್ಲಿಸಿದ್ದಾರೆ.

**3.** ಪ್ರತಿವಾದಿಯು ಪ್ರತಿವಾದ ಪತ್ರವನ್ನು ಸಲ್ಲಿಸಿರುತ್ತಾರೆ. ತಮ್ಮ ಪ್ರತಿವಾದ ಪತ್ರದಲ್ಲಿ ಹೇಳಿರುವುದೇನೆಂದರೆ, ಸರ್ವೆ ನಂಬರ್ 34/ಪಿ3, ವಿಸ್ತೀರ್ಣ 2 ಎಕರೆ 0.08 ಗುಂಟೆ ಸ್ವತ್ತು ಪ್ರತಿವಾದಿಯ ಹೆಸರಿನಲ್ಲಿ ಖಾತೆ ಇರುವುದನ್ನು ಒಪ್ಪಿಕೊಂಡಿದ್ದು, ಆದರೆ ಸದರಿ ಸರ್ವೆ ನಂಬರಿನ ವಿಸ್ತೀರ್ಣ 0.27 ಸ್ವತ್ತು ಪ್ರತಿವಾದಿಯ ಹೆಸರಿಗೆ ಪ್ರತ್ಯೇಕವಾಗಿರುವುದನ್ನು ಅಲ್ಲಗಳೆದಿರುತ್ತಾರೆ. ಸರ್ವೆ ನಂಬರ್.34/ಪಿ3, ವಿಸ್ತೀರ್ಣ 2 ಎಕರೆ 0.08 ಗುಂಟೆ ಸ್ವತ್ತು ಪ್ರತಿವಾದಿಯ ಹೆಸರಿನಲ್ಲಿ ಪೌತಿ ವಾರಸು ಮೂಲಕ ವರ್ಗಾವಣೆಯಾಗಿರುತ್ತದೆ ಎಂಬ ವಾದ ಪತ್ರದ ಸಂಗತಿಯನ್ನು ಮತ್ತು ವಾದಿ, ರಾಜಕುಮಾರ ಮತ್ತು ಮಹೇಂದ ಎಂಬುವವರು ತನ್ನ ಮಕ್ಕಳು ಎಂದು ಒಪ್ಪಿಕೊಂಡಿರುತ್ತಾರೆ. ಮುಂದುವರೆದು ಪ್ರತಿವಾದಿಯು ವಾದಿಯಿಂದ

ರೂ.1,58,000/- ಹಣವನ್ನು ಪಡೆದಿದ್ದು ಹಾಗೂ ದಿನಾಂಕ 04.07.2007 ರಂದು ಸಾಲದ ತೀರುವಳಿ ಪತ್ರ ಮತ್ತು ಕ್ರಯದ ಒಪ್ಪಂದ ಕರಾರು ಪತ್ರವನ್ನು ಬರೆದುಕೊಟ್ಟಿದ್ದಾರೆ ಎಂಬುದನ್ನು ಸಂಪೂರ್ಣವಾಗಿ ಅಲ್ಲಗಳೆದಿರುತ್ತಾರೆ. ಅಲ್ಲದೇ ಸದರಿ ದಾಖಲೆಗಳನ್ನು ವಾದಿಯು ಸೃಷ್ಟಿಪಡಿಸಿಕೊಂಡಿರುವುದಾಗಿ ತಿಳಿಸಿರುತ್ತಾರೆ. ಅಲ್ಲದೇ ಪ್ರತಿವಾದಿಯ ಗಂಡನಾದ ಬಿ.ಎನ್.ಬಸವರಾಜಪ್ಪ ಹಾಗೂ ಆಕೆಯ ಮಕ್ಕಳು ಸುಮಾರು 28 ವರ್ಷಗಳ ನಡುವೆ ವಾದಿಗೆ ವಿವಾಹ ಮಾಡಿದ್ದು, ವಾದಿಯು ಸರ್ವೆ ನಂಬರ್ 34/3 ಪಿ ಸ್ವತ್ತಿನಲ್ಲಿರುವ ತನ್ನ ಹಿಸ್ಸೆಯ ಬದಲಿಗೆ ನಗದು ರೂ.50,000/- ಹಣವನ್ನು ಹಾಗೂ ಚಿನ್ನದ ಒಡವೆಗಳನ್ನು ಪಡೆದಿರುತ್ತಾರೆ. ತದನಂತರ ಸರ್ವೆ ನಂಬರ್ 34/3 ಪಿ, ವಿಸ್ತೀರ್ಣ 2 ಎಕರೆ 0.08 ಗುಂಟೆ ಬಿ.ಎನ್.ಬಸವರಾಜಪ್ಪ ರವರ ಹೆಸರಿನಲ್ಲಿದ್ದು, ಆತನ ಮರಣಾನಂತರ ಸದರಿ ಸ್ವತ್ತು ಎಂ.ಆರ್.ಸಂಖ್ಯೆ:26/2004-05 ರಂತೆ ಪ್ರತಿವಾದಿಯ ಹೆಸರಿಗೆ ಬದಲಾಗಿದ್ದು, ನಂತರ ಪ್ರತಿವಾದಿ ಮತ್ತು ಆಕೆಯ ಗಂಡು ಮಕ್ಕಳು ದಾವಾ ಸರ್ವೆ ನಂಬರ್ ಸ್ವತ್ತಿನಲ್ಲಿ ಜಂಟಿ ಸ್ವಾಧೀನಾನುಭವವನ್ನು ಹೊಂದಿರುತ್ತಾರೆ. ವಾದಿಯು ಕಡೂರಿನ ಘನ 3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯದಲ್ಲಿ ಅಸಲು ದಾವಾ ಸಂಖ್ಯೆ:374/2018 ರಂತೆ ಪ್ರತಿವಾದಿ ಮತ್ತು ಆಕೆಯ ಸಹೋದರರ ವಿರುದ್ಧ ಸರ್ವೆ ನಂಬರ್ 34/3 ಪಿ, ವಿಸ್ತೀರ್ಣ 2 ಎಕರೆ 0.08 ಗುಂಟೆ ಸ್ವತ್ತಿನ ಸಂಬಂಧ ವಿಭಾಗ ಮತ್ತು ಪ್ರತ್ಯೇಕ ಸ್ವಾಧೀನತೆ ಕೇಳಿ ದಾವೆ ಸಲ್ಲಿಸಿದ್ದು, ಸದರಿ

ದಾವೆ ಅಧಿವಿಚಾರಣಾ ಹಂತದಲ್ಲಿದೆ. ಆದುದರಿಂದ, ಈ ದಾವೆಯನ್ನು ಖರ್ಚು ಸಮೇತ ವಜಾಗೊಳಿಸಲು –ಪ್ರತಿವಾದಿಯು ಪ್ರಾರ್ಥಿಸಿರುತ್ತಾರೆ.

**4.** ವಾದ ಪತ್ರ, ಪ್ರತಿವಾದಿಯ ಪ್ರತಿವಾದ ಪತ್ರ ಹಾಗೂ ಉಭಯತ್ರೆಯರು ನ್ಯಾಯಾಲಯಕ್ಕೆ ಸಲ್ಲಿಸಿದ ಎಲ್ಲಾ ದಾಖಲೆಗಳನ್ನು ಪರಿಶೀಲಿಸಿ, ನನ್ನ ಹಿಂದಿನ ಮಾನ್ಯ ಪೀಠಾಸೀನಾಧಿಕಾರಿಗಳು ಈ ಕೆಳಕಂಡ ವಿವಾದಾಂಶಗಳನ್ನು ರಚಿಸಿರುತ್ತಾರೆಃ

**ವಿವಾದಾಂಶಗಳು**

1. ವಾದಿಯು ದಿನಾಂಕ 04.07.2007 ರಂದು ಪ್ರತಿವಾದಿಗೆ ರೂ.1,58,000/– ರೂ.ಗಳನ್ನು ಸಾಲದ ರೂಪದಲ್ಲಿ ಪಾವತಿ ಮಾಡಿದ್ದಾರೆಂದು ರುಜುವಾತು ಪಡಿಸಿರುತ್ತಾರೆಯೇ?

2. ವಾದಿಯು ದಿನಾಂಕ 04.07.2007 ರಂದು ಪ್ರತಿವಾದಿ ಸಾಲ ತೀರುವಳಿ ಪತ್ರ ಹಾಗೂ ಕ್ರಯದ ಕರಾರು ಪತ್ರ ತನ್ನ ಪರವಾಗಿ ಬರೆದುಕೊಟ್ಟಿರುತ್ತಾರೆಂದು ರುಜುವಾತುಪಡಿಸಿರುತ್ತಾರೆಯೇ?

3. ವಾದಿಯು ದಾವೆಯಲ್ಲಿ ಕೇಳಿರುವಂತೆಯೇ ಪರಿಹಾರ ಪಡೆಯಲು ಅರ್ಹರಾಗಿರುತ್ತಾರೆಯೇ?

4. ಆಗಿದ್ದಲ್ಲಿ ಯಾವ ಆದೇಶ ಅಥವಾ ಡಿಕ್ರಿ?

KACM210003462020

5. ಮೇಲಿನ ವಿವಾದಾಂಶಗಳನ್ನು ರುಜುವಾತುಪಡಿಸುವ ಸಲುವಾಗಿ 1 ನೇ ವಾದಿಯು ತನ್ನನ್ನು ವಾ.ಸಾ-1(ಪಿ.ಡಬ್ಲ್ಯು-1) ಎಂದು ವಿಚಾರಣೆಗೆ ಒಳಪಡಿಸಿಕೊಂಡಿದ್ದು, ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ನಿಪಿ-1 ಎಂದು ಬೀರೂರು ಹೋಬಳಿ ಬಳ್ಳಿಗನೂರು ಗ್ರಾಮದ ಸರ್ವೆ ನಂ.34/3 ಪಿ ರ 2017-18 ರ ಪಹಣಿಯನ್ನು, ನಿಪಿ-2 ಎಂದು ದಿನಾಂಕ 04.07.2007 ರ ತಿರುವಳಿ ಹಾಗೂ ಕ್ರಯಒಪ್ಪಂದ ಕರಾರು ಪತ್ರವನ್ನು, ನಿಪಿ-3 ಎಂದು ದಿನಾಂಕ 09.07.2018 ರಂದು ವಕೀಲರ ಮೂಲಕ ನೀಡಿದ ನೋಟೀಸಿನ ಕಛೇರಿ ಪ್ರತಿಯನ್ನು, ನಿಪಿ-4 ಎಂದು ಅಂಚೆ ಸ್ವೀಕೃಯನ್ನು ನಿಶಾನೆಗಳನ್ನಾಗಿ ಗುರುತಿಸಿಕೊಂಡಿರುತ್ತಾರೆ. ಇದಕ್ಕೆ ವಿರುದ್ಧವಾಗಿ ಪ್ರತಿವಾದಿಯು ತನ್ನ ಮಗನಾದ ಮಹೇಂದ್ರ ರವರನ್ನು ಡಿ.ಡಬ್ಲ್ಯೂ-1 ಎಂದು ವಿಚಾರಣೆಗೆ ಒಳಪಡಿಸಿರುತ್ತಾರೆ. ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ನಿಡಿ-1 ಎಂದು ವಿಶೇಷ ಮುಕ್ತ್ಯಾರ್ ನಾಮೆ ಪತ್ರವನ್ನು, ನಿಡಿ-2 ಮತ್ತು 3 ಎಂದು ಅಸಲು ದಾವಾಃ374/2018 ರ ವಾದಪತ್ರ, ಪ್ರತಿವಾದ ಪತ್ರದ ದೃಢೀಕೃತ ಪ್ರತಿಗಳನ್ನು ಕ್ರಮವಾಗಿ ನಿಶಾನೆಗಳನ್ನಾಗಿ ಗುರುತಿಸಿಕೊಂಡಿರುತ್ತಾರೆ.

6. ವಾದಿಗಳು ಮತ್ತು ಪ್ರತಿವಾದಿ ಪರ ವಕೀಲರ ವಾದ ಮಂಡನೆಯನ್ನು ಆಲಿಸಲಾಯಿತು ಮತ್ತು ನ್ಯಾಯಾಲಯದಲ್ಲಿರುವ ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಯಿತು.

KACM210003462020

| | | |
|---|---|---|
| ವಿವಾದಾಂಶ –1 | – | ನಕಾರಾತ್ಮಕವಾಗಿ |
| ವಿವಾದಾಂಶ –2 | – | ನಕಾರಾತ್ಮಕವಾಗಿ |
| ವಿವಾದಾಂಶ –3 | – | ನಕಾರಾತ್ಮಕವಾಗಿ |
| ವಿವಾದಾಂಶ –4 | – | ಅಂತಿಮ ಆದೇಶದಂತೆ |

:: **ಕಾರಣಗಳು** ::

7. **ವಿವಾದಾಂಶ 1** :: ವಾದಪತ್ರ ಖಂಡಿಕೆ–3 ರಲ್ಲಿ ಹಾಗೂ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ, ದಿನಾಂಕ 04.07.2007 ರಲ್ಲಿ ರೂ.1,58,000/– ಹಣವನ್ನು ಸಾಲದ ರೂಪದಲ್ಲಿ ಪ್ರತಿವಾದಿಯು ತನ್ನಿಂದ ಪಡೆದಿರುವುದಾಗಿ 1 ನೇ ವಾದಿ/ ಪಿಡಬ್ಲ್ಯೂ–1 ತಿಳಿಸಿರುತ್ತಾರೆ. 1 ನೇ ವಾದಿ / ಪಿಡಬ್ಲ್ಯೂ–1 ರವರು ನಿಪಿ–1 ರಂತೆ ತೀರುವಳಿ ಪತ್ರ ಹಾಗೂ ಕ್ರಯ ಒಪ್ಪಂದ ಕರಾರು ಪತ್ರವನ್ನು ನಿಪಿ–2 ಎಂದು ತನ್ನ ಪರ ನಿಶಾನೆಗೊಳಿಸಿಕೊಂಡಿರುತ್ತಾರೆ. ಸದರಿ ಪತ್ರದ ಖಂಡಿಕೆ–2 ರಲ್ಲಿ ಈ ರೀತಿ ಬೆರಳಚ್ಚುಗೊಂಡಿರುತ್ತದೆ.

> "**...**..... **ಕ್ರಯ ಒಪ್ಪಂದ ಕರಾರು ಪತ್ರ ಏನೆಂದರೆ, ನಾನು ಈ ಹಿಂದೆ ನಿಮ್ಮಲ್ಲಿ ನಗದಾಗಿ ರೂ.1,58,000–00(ಒಂದು ಲಕ್ಷದ ಐವತ್ತೆಂಟು ಸಾವಿರ) ರೂಪಾಯಿಗಳನ್ನು ಸಾಕ್ಷಿಗಳ ಮೊಕ್ತ ಸಾಲವಾಗಿ ಪಡೆದುಕೊಂಡಿದ್ದು**......"

ಸದರಿ ದಾಖಲೆಯ ಅಂಶಗಳನ್ನು ಪರಿಗಣಿಸಿದಾಗ, ಸದರಿ ದಾಖಲೆಯ ದಿನಾಂಕ 04.07.2007 ರಂದು ಬರೆಳಚ್ಚುಗೊಂಡಿದ್ದು, ಆ ದಿನಾಂಕದ ಹಿಂದೆಯೇ ಪ್ರತಿವಾದಿಯು ವಾದಿಗಳಿಂದ ರೂ.1,58,000/- ಹಣವನ್ನು ಪಡೆದಿರುವುದಾಗಿ ಅರ್ಥಯಿಸುತ್ತದೆಯೇ ವಿನಃ ದಿನಾಂಕ 04.07.2007 ರಂದು ಪ್ರತಿವಾದಿಯು ವಾದಿಗಳಿಂದ ಹಣ ಪಡೆದಿರುವುದಾಗಿ ನಮೂದಾಗಿರುವುದಿಲ್ಲ. ಅಲ್ಲದೆ ಪ್ರತಿವಾದಿಗಳ ಪರ ವಕೀಲರು 1 ನೇ ವಾದಿ / ಪಿ.ಡಬ್ಲ್ಯೂ-1 ರವರನ್ನು ಪಾಟೀ ಸವಾಲಿಗೆ ಒಳಪಡಿಸಿದಾಗ, ನಿಪಿ-2 ರಲ್ಲಿ ಸಾಲವನ್ನು ಯಾವ ದಿನಾಂಕ ನೀಡಲಾಗಿದೆ ಎಂದು ದಿನಾಂಕ ನಮೂದಾಗಿಲ್ಲ ಎಂದು ಒಪ್ಪಿಕೊಂಡಿರುತ್ತಾರೆ.

**8.** ನಿಪಿ-2 ಸಾಲದ ತೀರುವಳಿ ಕ್ರಯ ಪತ್ರ ಹಾಗೂ ವಾದ ಪತ್ರದ ಅಂಶಗಳನ್ನು ಪರಿಗಣಿಸಿದಾಗ ಪ್ರತಿವಾದಿಯು ಸಾಕ್ಷಿಯ ಸಮಕ್ಷಮ ರೂ.1,58,000/- ಗಳನ್ನು ವಾದಿಗಳಿಂದ ಪಡೆದುಕೊಂಡಿರುವುದಾಗಿ ನಮೂದಾಗಿರುತ್ತದೆ. ಆದುದರಿಂದಾಗಿ ನಿಪಿ-2 ರಂತೆ ಪ್ರತಿವಾದಿಯು ವಾದಿಗಳಿಂದ ರೂ.1,58,000/- ಗಳನ್ನು ಸಾಲವಾಗಿ ಪಡೆದಿದ್ದರೂ ಎಂಬ ಸಂಗತಿಯನ್ನು ರುಜುವಾತುಪಡಿಸಲು ಸದರಿ ಸಾಕ್ಷಿಯ ಸಾಕ್ಷ್ಯವು

ಅತ್ಯಮೂಲ್ಯವಾಗಿರುತ್ತದೆ. ಆದರೆ ವಾದಿಯು ಸದರಿ ನಿಪಿ-2 ರಲ್ಲಿರುವ ಸಾಕ್ಷಿಯನ್ನು ತನ್ನ ಪರವಾಗಿ ವಿಚಾರಣೆಗೆ ಒಳಪಡಿಸಿರುವುದಿಲ್ಲ.

**9.** ಪ್ರತಿವಾದಿಗಳ ಪರ ವಕೀಲರು 1 ನೇ ವಾದಿ / ಪಿಡಬ್ಲ್ಯೂ -1 ರವರನ್ನು ಪಾಟೀ ಸವಾಲಿಗೆ ಒಳಪಡಿಸಿದಾಗ, ಪ್ರತಿವಾದಿಯು ತನ್ನ ತಾಯಿಯಾಗಿರುವ ಕಾರಣ ತಾನು ಪಟ್ಟಣ ಸಹಕಾರ ಬ್ಯಾಂಕಿನಲ್ಲಿ ಸಾಲ ಪಡೆದ ಹಣವನ್ನು ತನ್ನ ತಾಯಿಗೆ ನೀಡಿದ್ದು, ಸದರಿ ಪಟ್ಟಣ ಸಹಕಾರ ಬ್ಯಾಂಕಿನಿಂದ ಪಡೆದ ಸಾಲವನ್ನು ಮರುಪಾವತಿ ಮಾಡಿರುವುದಾಗಿ ನುಡಿದಿರುತ್ತಾರೆ. 1 ನೇ ವಾದಿಯು ಪಟ್ಟಣ ಸಹಕಾರಿ ಬ್ಯಾಂಕಿನಿಂದ ಸಾಲ ಪಡೆದಿರುವ ಬಗ್ಗೆ ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಅಲ್ಲದೆ ವಾದಿಯು ಆರ್ಥಿಕವಾಗಿ ಚೇತನವುಳ್ಳವರಾಗಿಲ್ಲವಾದ್ದರಿಂದ ಸಾಲ ಮಾಡಿದ ಹಣವನ್ನು ತನ್ನ ತಾಯಿಯಾದ ಪ್ರತಿವಾದಿಗೆ ನೀಡಿದ್ದರೆ ಎಂಬ ಸಂಶಯ ತಲೆದೋರುತ್ತದೆ. ಅಲ್ಲದೆ ವಾದಿ ಪರ ವಕೀಲರು ಪ್ರತಿವಾದಿ ಪರ ವಿಚಾರಣೆಗೊಂಡ ಪ್ರತಿವಾದಿಯ ಮಗನಾದ ಡಿಬ್ಲ್ಯೂ-1 ರವರನ್ನು ಪಾಟೀ ಸವಾಲಿಗೆ ಒಳಪಡಿಸಿ, ಪ್ರತಿವಾದಿಯು 1 ನೇ ವಾದಿಯಿಂದ ಸಾಲ ಪಡೆದಿದ್ದಾರೆಂಬ ಸೂಚನೆ ನೀಡಿದ್ದರೂ ಸಹ ತನ್ನ ನಿಲುವಿಗೆ ಪೂರಕವಾದ ಉತ್ತರ ಪಡೆದಿರುವುದಿಲ್ಲ. ಆದುದರಿಂದಾಗಿ ಪ್ರತಿವಾದಿಯು ವಾದಿಗಳಿಂದ ದಿನಾಂಕ 04.07.2007 ರಂದು

ರೂ.1,58,000/- ಹಣವನ್ನು ಸಾಲವಾಗಿ ಪಡೆದಿದ್ದರೂ ಎಂಬುವುದನ್ನು ವಾದಿಗಳು ರುಜುವಾತುಪಡಿಸಲು ಸಂಪೂರ್ಣವಾಗಿ ವಿಫಲರಾಗಿರುವುದರಿಂದ ವಿವಾದಾಂಶ -1 ನ್ನು ನಕಾರಾತ್ಮಕವಾಗಿ ಉತ್ತರಿಸಲಾಗಿದೆ.

10. **ವಿವಾದಾಂತ 2 ಮತ್ತು 3 ::** ಈ ಎರಡು ವಿವಾದಾಂಶಗಳು ಒಂದು ಚರ್ಚೆಯನ್ನು ಅವಲಂಬಿಸಿದ್ದು, ಆದುದರಿಂದ, ಸಂಗತಿಗಳ ಪುನರಾವರ್ತನೆಯನ್ನು ತಪ್ಪಿಸಲು ಈ ಎರಡು ವಿವಾದಾಂಶಗಳನ್ನು ಒಟ್ಟಿಗೆ ಚರ್ಚೆಗೆ ತೆಗೆದುಕೊಳ್ಳಲಾಯಿತು.

11. ದಾವಾ ಅನುಸೂಚಿ ಸರ್ವೆ ನಂಬರ್ 34/3 ಪಿ, ವಿಸ್ತೀರ್ಣ 2.08 ಸ್ವತ್ತಿನ ಖಾತೆಯು ಪ್ರತಿವಾದಿಯ ಗಂಡನಾದ ಮತ್ತು 1 ನೇ ವಾದಿ, ರಾಜಕುಮಾರ ಮತ್ತು ಮಹೇಂದ್ರ ರವರ ತಂದೆಯಾದ ಶ್ರೀ ಬಿ.ಎನ್.ಬಸವರಾಜಪ್ಪ ರವರ ಹೆಸರಿನಲ್ಲಿದ್ದು, ಆತನ ಮರಣದ ನಂತರ ಸದರಿ ಸ್ವತ್ತಿನ ಖಾತೆಯು ಪ್ರತಿವಾದಿಯ ಹೆಸರಿಗೆ ಎಂ.ಅರ್.ಸಂಖ್ಯೆ:26/2004-05 ರಂತೆ ಖಾತೆಯಾಗಿರುವುದಾಗಿ ಪ್ರತಿವಾದಿಯು ಪ್ರತಿವಾದ ಪತ್ರದಲ್ಲಿ ತಿಳಿಸಿಕೊಂಡಿರುತ್ತಾರೆ. ದಿನಾಂಕ 02.06.2026 ರಂದು ವಾದಿ ಪರ ವಕೀಲರು ಪ್ರತಿವಾದಿಯ ಮಗನಾದ ಮತ್ತು 1 ನೇ ವಾದಿಯ ಸಹೋದರನಾದ ಡಿಬ್ಲ್ಯೂ-1 / ಬಿ.ಮಹೇಂದ್ರ ರವರನ್ನು ಪಾಟೀ ಸವಾಲಿಗೆ ಒಳಪಡಿಸಿದಾಗ, ಬಿ.ಮಹೇಂದ್ರ ಮತ್ತು 1 ನೇ

ವಾದಿಯ ತಂದೆಗೆ ಬಳ್ಳಿಗನೂರು ಗ್ರಾಮದಲ್ಲಿಸರ್ವೆ ನಂ.34/ಬಿ, ವಿಸ್ತೀರ್ಣ 2 ಎಕರೆ 8 ಗುಂಟೆ ಸ್ವತ್ತು ಇದ್ದು, ಆತನ ಮರಣದ ನಂತರ ಸದರಿ ಸ್ವತ್ತು ಪ್ರತಿವಾದಿಗೆ ಪೌತಿ ವಾರಸು ಮೂಲಕ ಬಂದಿದ್ದು, ಸದರಿ ಸ್ವತ್ತಿನಲ್ಲಿ ಪ್ರತಿವಾದಿಗೆ ಮತ್ತು ಆಕೆಯ ಮೂರು ಜನ ಮಕ್ಕಳಿಗೆ ಭಾಗಾಂಶದ ಹಕ್ಕಿರುವುದಾಗಿ ಸೂಚನೆ ನೀಡಿರುತ್ತಾರೆ. ಆದುದರಿಂದಾಗಿ ಸದರಿ ಸೂಚನೆಯಿಂದ ದಾವಾ ಸ್ವತ್ತು ಮೂಲತಃ 1 ನೇ ವಾದಿಯ ತಂದೆ ಮತ್ತು ಪ್ರತಿವಾದಿಯ ಗಂಡನಾದ ಬಿ.ಎನ್.ಬಸವರಾಜಪ್ಪ ರವರಿಗೆ ಸೇರಿದ ಸ್ವಯಾರ್ಜಿತ ಆಸ್ತಿ ಎಂಬುವುದು ದೃಢವಾಗುತ್ತದೆ. ಅಲ್ಲದೆ ವಾದ ಪತ್ರದ ಹಾಗೂ 1 ನೇ ವಾದಿಯು ಸಲ್ಲಿಸಿರುವ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ, ದಾವಾ ಸ್ವತ್ತಿನ ಮೇಲೆ 1 ನೇ ವಾದಿಗೆ ಕಾನೂನುಬದ್ಧ ಹಿತಾಸಕ್ತಿ ಇರುವುದಾಗಿ ತಿಳಿಸಿಕೊಂಡಿರುತ್ತಾರೆ.

**11.1** ಭಾರತೀಯ ಕರಾರು 1823 ಕಲಂ-10 ರ ಪ್ರಕಾರ ಯಾವ ಒಡಂಬಡಿಕೆಗಳು ಕರಾರುಗಳಾಗುತ್ತವೆ ಎಂಬುದನ್ನು ತಿಳಿಸುತ್ತದೆ. ಆ ಪ್ರಕಾರ ಯಾವುದೇ ಒಡಂಬಡಿಕೆಗಳು ಕರಾರು ಮಾಡಿಕೊಳ್ಳಲು ಅರ್ಹರಾದ ವ್ಯಕ್ತಿಗಳು ಮುಕ್ತ ಸಮ್ಮತಿಯಿಂದ, ಕಾನೂನುಬದ್ಧ ಪ್ರತಿಫಲಕ್ಕೆ ಮತ್ತು ಕಾನೂನುಬದ್ಧ ಉದ್ದೇಶಕ್ಕೆ ಮತ್ತು ಶೂನ್ಯವೆಂದು

KACM210003462020

ಘೋಷಿಸಲ್ಪಟ್ಟಿರದವುಗಳಾಗಿದ್ದಾಗ ಅಂತಹ ಒಡಂಬಡಿಕೆಗಳು ಕರಾರುಗಳಾಗುತ್ತವೆ ಎಂದು ತಿಳಿಸುತ್ತದೆ.

**11.2** ಪ್ರಸ್ತುತ ದಾವೆಯಲ್ಲಿ ದಾವಾ ಸರ್ವೆ ನಂಬರ್ 34/3 ಪಿ, ವಿಸ್ತೀರ್ಣ 0.08 ಗುಂಟೆ ಸ್ವತ್ತು 1 ನೇ ವಾದಿಯ ತಂದೆ ಮತ್ತು ಪ್ರತಿವಾದಿ ಗಂಡನಾದ ಬಿ.ಎನ್.ಬಸವರಾಜಪ್ಪರವರಿಗೆ ಸೇರಿರುತ್ತದೆ. ಸದರಿ ಬಸವರಾಜಪ್ಪ ರವರು ಮೃತರಾಗಿದ್ದು, ದಾವಾ ಸ್ವತ್ತಿಗೆ ಹಿಂದೂ ಉತ್ತರಾಧಿಕಾರ ಕಾಯ್ದೆ 1956 ರಂತೆ ಆತನ ವಾರಸುದಾರರಾಗಿ ಆತನ ಮಕ್ಕಳಾದ 1 ನೇ ವಾದಿ, ರಾಜಕುಮಾರ ಮತ್ತು ಮಹೇಂದ್ರ ರವರು ಹಾಗೂ ಆತನ ಹೆಂಡತಿಯಾದ ಪ್ರತಿವಾದಿಯು ಹಕ್ಕು, ಅಧಿಕಾರ ಮತ್ತು ಹಿತಾಸಕ್ತಿಯನ್ನು ಹೊಂದಿರುತ್ತಾರೆ. ಆದುದರಿಂದಾಗಿ ದಾವಾ ಸ್ವತ್ತಿನ ಸಂಬಂಧ ಯಾವುದೇ ಕರಾರನ್ನು ಮಾಡಿಕೊಳ್ಳಲು ಅಥವಾ ದಾವಾ ಸ್ವತ್ತನ್ನು ವರ್ಗಾಯಿಸಲು ಪ್ರತಿವಾದಿಗೆ ಏಕಸ್ವಾಮ್ಯ ಹಕ್ಕು ಮತ್ತು ಅಧಿಕಾರವಿರುವುದಿಲ್ಲ.

**12.** ಪ್ರತಿವಾದಿಯು ದಿನಾಂಕ 04.07.2007 ರಂದು ದಾವಾ ಸ್ವತ್ತಿನ ಸಂಬಂಧ ತಾನು ಯಾವುದೇ ಸಾಲ ತೀರುವಳಿ ಪತ್ರ ಮತ್ತು ಕ್ರಯದ ಕರಾರು ಪತ್ರವನ್ನು ಬರೆದುಕೊಟ್ಟಿಲ್ಲವೆಂದು ನಿಲುವು ಪಡೆದಿರುತ್ತಾರೆ. ಆದುದರಿಂದಾಗಿ ಸದರಿ ಪತ್ರವು ಪ್ರತಿವಾದಿಯಿಂದ ಜಾರಿಗೊಂಡಿದೆ ಎಂಬುವುದನ್ನು ಭಾರತೀಯ ಸಾಕ್ಷ್ಯ ಅಧಿನಿಯಮ 1872

KACM210003462020

ಕಲಂ 102 ರಂತೆ ವಾದಿಯು ರುಜುವಾತುಪಡಿಸಿಕೊಳ್ಳಬೇಕಾಗುತ್ತದೆ. ದಿನಾಂಕ 14.06.2024 ರಂದು ಪ್ರತಿವಾದಿಗಳ ಪರ ವಕೀಲರು 1 ನೇ ವಾದಿ / ಪಿಡಬ್ಲ್ಯೂ -1 ರವರನ್ನು ಪಾಟೀ ಸವಾಲಿಗೆ ಒಳಪಡಿಸಿದಾಗ, ನಿಪಿ-2 ಪತ್ರದಲ್ಲಿರುವ ಸಹಿ ಪ್ರತಿವಾದಿಗೆ ಸೇರಿರುವುದಿಲ್ಲ ಮತ್ತು ಸದರಿ ಸಹಿಯನ್ನು ಸೃಷ್ಟಿಸಲಾಗಿದೆ ಎಂದು ಸೂಚನೆ ನೀಡಿರುತ್ತಾರೆ. ಆದುದರಿಂದಾಗಿ ನಿಪಿ-2 ಸಾಲದ ತೀರುವಳಿ ಪತ್ರ ಕ್ರಯದ ಒಪ್ಪಂದ ಕರಾರಿನಲ್ಲಿ ಪ್ರತಿವಾದಿಯು ಸಹಿ ಮಾಡಿದ್ದಾರೆ ಎಂಬುವುದನ್ನು ರುಜುವಾತುಪಡಿಸಲು ಸದರಿ ದಾಖಲೆಯನ್ನು ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸುವ ಮುಖಾಂತರ ಸತ್ಯಾಸತ್ಯತೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಕೊಳ್ಳಬಹುದಿತ್ತು. ಆದರೆ ವಾದಿಯು ಮೌಖಿಕ ಅಂಶಗಳನ್ನು ಹೊರತುಪಡಿಸಿ ಮತ್ತಿತರೆ ದೃಢವಾದ ವೈಜ್ಞಾನಿಕ ಸಾಕ್ಷ್ಯವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಕೊಂಡಿರುವುದಿಲ್ಲ. ಅಲ್ಲದೆ ನಿಪಿ-2 ದಾಖಲೆಯಲ್ಲಿರುವ ಸಾಕ್ಷಿದಾರರನ್ನು ಸಹ ತನ್ನ ಪರವಾಗಿ ವಿಚಾರಣೆಗೆ ಒಳಪಡಿಸಿರುವುದಿಲ್ಲ.

**12.1** ಪ್ರತಿವಾದಿಗಳ ಪರ ವಕೀಲರು 1 ನೇ ವಾದಿ / ಪಿ.ಡಬ್ಲ್ಯೂ -1 ರವರನ್ನು ಪಾಟೀ ಸವಾಲಿಗೆ ಒಳಪಡಿಸಿದಾಗ, ನಿಪಿ-2 ದಾಖಲೆಯನ್ನು ತನಗೆ ಮಾತ್ರ ಬರೆದುಕೊಟ್ಟಿರುವುದಾಗಿ ನುಡಿದಿರುತ್ತಾರೆ. ಆದರೆ ನಿಪಿ-2 ರ ದಾಖಲೆಯ ಅಂಶಗಳನ್ನು

KACM210003462020

ಪರಿಶೀಲಿಸಿದಾಗ, ಸದರಿ ದಾಖಲೆಯು 1 ನೇ ವಾದಿ ಮತ್ತು ಆಕೆಯ ಗಂಡನಾದ 2 ನೇ ವಾದಿಗಳಿಬ್ಬರ ಪರವಾಗಿಯೂ ಬರೆದಂತಿದೆ. ಆದುದರಿಂದಾಗಿ ನಿಪಿ–2 ರ ದಾಖಲೆಯು 2 ನೇ ವಾದಿಯು ಗಮನಕ್ಕೆ ಬಾರದಂತೆ ಬರೆಯಲಾಗಿದೆ ಎಂದು ನ್ಯಾಯಾಲಯವು ಪೂರ್ವಭಾವನೆ ತಳೆದಿದೆ.

**12.2** ನಿಪಿ–2 ದಾಖಲೆಗೆ ಎರಡು ಛಾಪಕಾಗದಗಳಲ್ಲಿ ಬರೆದಿದ್ದು, ಮೊದಲ ಪುಟದ ಛಾಪ ಕಾಗದವು ದಿನಾಂಕ 02.07.2007 ಕ್ಕೆ ಸಂಬಂಧಿಸಿದ್ದು, 2 ನೇ ಪುಟ ಛಾಪಕಾಗದವು ದಿನಾಂಕ 29.06.2007 ಕ್ಕೆ ಸಂಬಂಧಿಸಿರುತ್ತದೆ. ಸದರಿ 2 ವಿಭಿನ್ನ ದಿನಾಂಕಗಳ ಛಾಪಕಾಗದಗಳಲ್ಲಿ ನಿಪಿ–2 ರ ದಾಖಲೆ ಬರೆದಿರುವುದನ್ನು ಪಿಡಬ್ಲ್ಯೂ–1 ರವರು ಪಾಟೀ ಸವಾಲಿನಲ್ಲಿ ಒಪ್ಪಿಕೊಂಡಿರುತ್ತಾರೆ. ಅಲ್ಲದೆ ಪಿಡಬ್ಲ್ಯೂ–1 ರವರು ಮುಂದುವರೆದು ಈ ಕೆಳಕಂಡಂತೆ ಸಾಕ್ಷ್ಯನುಡಿದಿರುತ್ತಾರೆ.

> **'ನಿಪಿ2 ರಲ್ಲಿ ಹಣ ತೀರುವಳಿ ಪತ್ರ ಎಂದು ನಮೂದು ಇದ್ದ ಬರವಣಿಗೆಯನ್ನು ವೈಟ್‌ನಾರ್ ಹಾಕಿ ಪುನಾ ಟೈಪ್ ಬೆರಳಚ್ಚು ಮಾಡಲಾಗಿರುತ್ತದೆ ಎಂದರೆ ಅದರ ಬಗ್ಗೆ ನನಗೆ ಮಾಹಿತಿ ಇಲ್ಲ ಅದನ್ನು ನನ್ನ ತಾಯಿಯೇ ಮಾಡಿಸಿಕೊಟ್ಟಿರುತ್ತಾರೆ. ನಿಪಿ2 ಪತ್ರ ತಯಾರು ಮಾಡಲು ಮಾಹಿತಿಯನ್ನು ನನ್ನ ತಾಯಿ ಮತ್ತು ನನ್ನ ಚಿಕ್ಕಪ್ಪ ನೀಡಿರುತ್ತಾರೆ. ನಾನು ಯಾವುದೇ ಮಾಹಿತಿ ನೀಡಿಲ್ಲ. ಪತ್ರ**

**ಟೈಪ್ ಆಗುವಾಗ ನಾನು ಸ್ಥಳದಲ್ಲಿಯೇ ಇದ್ದೆ, ಆದರೆ ಮಾಹಿತಿ ನೀಡಿರುವುದಿಲ್ಲ.**

**ನಿಪಿ2 ರ 1 ನೇ ಪುಟದಲ್ಲಿ ವರ್ಷ, ಚಿಕ್ಕಮಗಳೂರು, ಡಿಸಿಸಿ ಬ್ಯಾಂಕಿನ ಎಂಬ ಬರವಣಿಗೆಯನ್ನು ಚಿತ್ತು ಮಾಡಲಾಗಿದೆ ಎಂದರೆ ಸರಿ. ಸದರಿ ಚಿತ್ತು ಮಾಡಲಾಗಿರುವ ಜಾಗದಲ್ಲಿ ತಿಂಗಳು ಬೀರೂರು ಡಿಸಿಸಿ ಬ್ಯಾಂಕ್ A/c No...... ಎಂದು ನಮೂದು ಇದೆ ಎಂದರೆ ಸರಿ. ಅದೇ ರೀತಿ ನಿಪಿ2 ರ 2 ನೇ ಹಾಳೆಯಲ್ಲಿ ಸ್ವತ್ತನ್ನು ನಿಮ್ಮನ್ನು ನೊಂದಣಿ ಮಾಡಿಸಿಕೊಡಲು ಬದ್ಧನಾಗಿರುತ್ತೇನೆ ಎಂಬ ಸಾಲಿನ ಮೇಲೆ ನೀವು ಕರೆದಾಗ ಬಂದು ಎಂಬ ಬರವಣಿಗೆ ಸೇರಿಸಲಾಗಿದೆ ಎಂದರೆ ಸರಿ. ನಿಪಿ2 ನ್ನು ಆ ದಿನ ಯಾವ ಸಮಯದಲ್ಲಿ ತಯಾರು ಮಾಡಿರುತ್ತಾರೆ ಎಂದು ಗೊತ್ತಿಲ್ಲ. ನಿಪಿ2 ನ್ನು ಬಿ.ಸಿ.ಗೌಡರು ಎಂಬ ದಸ್ತಾವೇಜು ಬರಹಗಾರರು ಬರೆದಿರುತ್ತಾರೆ'.**

ಸಾಕ್ಷಿಯ ಈ ಮೇಲಿನ ಹೇಳಿಕೆಗಳನ್ನು ಪರಿಶೀಲಿಸಿದಾಗ, ನಿಪಿ-2 ಪ್ರಶ್ನಿತ ಕ್ರಯ ಒಪ್ಪಂದ ಕರಾರು ಪತ್ರದಲ್ಲಿ, 'ಹಣ ತೀರುವಳಿ ಪತ್ರ' ಎಂದು ವೈಟ್ ನರ್ ಹಾಕಿದ ಜಾಗದಲ್ಲಿ ಬೆರಳಚ್ಚು ಮಾಡಿರುವುದನ್ನು ಸಾಕ್ಷಿಯು ಒಪ್ಪಿಕೊಂಡಿರುತ್ತಾರೆ. 'ಚಿಕ್ಕಮಗಳೂರು ಡಿಸಿಸಿ ಬ್ಯಾಂಕ್' ಎಂಬುವುದನ್ನು ಒಡೆದು ಹಾಕಿ 'ಬೀರೂರು' ಎಂದು ಬರೆದಿರುತ್ತಾರೆ. ಅಲ್ಲದೆ 'ವರ್ಷವು' ಎಂಬುವುದನ್ನು ಒಡೆದು ಹಾಕಿ 'ತಿಂಗಳು ಬೀರೂರು DCC Bank A/60

No.2982 ಖಾತೆಗೆ ಬೀರೂರು' ಎಂದು ಬರೆದಿರುತ್ತಾರೆ. ಅಲ್ಲದೆ ಸದರಿ ಪ್ರಶ್ನಿತ ಪತ್ರದ ಪುಟ-2 ರಲ್ಲಿ ಕೊನೆಯ ಮೂರು ಪಂಕ್ತಿಗಳ ಮೇಲ್ಭಾಗದಲ್ಲಿ ' ನೀವು ಕರೆದಾಗ ಬಂದು' ಎಂದು ಬೆರಳಚ್ಚುಗೊಳಿಸಿರುತ್ತಾರೆ. ಈ ರೀತಿ ಪ್ರಶ್ನಿತ ಕರಾರು ಪತ್ರದಲ್ಲಿ ಅನೇಕ ಮಹತ್ವದ ವಿಚಾರಗಳು ಬದಲಾಯಿಸಿ ಬರವಣಿಗೆ ಮಾಡಿರುವುದನ್ನು ಮತ್ತು ಬೆರಳಚ್ಚುಗೊಳಿಸುವುದನ್ನು ವಾದಿಯು ತನ್ನ ವಾದ ಪತ್ರದಲ್ಲಿ ಎಲ್ಲಿಯೂ ತಿಳಿಸಿರುವುದಿಲ್ಲ. ಅಲ್ಲದೆ ಸದರಿ ಪ್ರಶ್ನಿತ ಪತ್ರದಲ್ಲಿ ಆ ರೀತಿ ಮಹತ್ವದ ಸಂಗತಿಗಳನ್ನು ಮಾರ್ಪಾಟುಗೊಳಿಸಿರುವುದಕ್ಕೆ ಪ್ರತಿವಾದಿಯ ಒಪ್ಪಿಗೆಯನ್ನು ಪಡೆದಿರುವ ಬಗ್ಗೆ ವಾದಿಯು ವಾದ ಪತ್ರದಲ್ಲಿ ತಿಳಿಸಿರುವುದಿಲ್ಲ. ಆದುದರಿಂದಾಗಿ ನಿಪಿ-1 ಪತ್ರವು ದಾವೆಗೋಸ್ಕರ ಸೃಷ್ಟಿಸಿದ ಪತ್ರ ಎಂಬುವುದಕ್ಕೆ ಯಾವುದೇ ಸಂಶಯವಿರುವುದಿಲ್ಲ.

**12.3** ಭಾರತೀಯ ಕರಾರು ಅಧಿನಿಯಮ, 1872 ಕಲಂ 62 ಈ ರೀತಿ ತಿಳಿಸುತ್ತದೆ.

> 62. **Effect of novation, rescission, and alteration of contract**.–If the parties to a contract agree to substitute a new contract for it, or to rescind or alter it, the original contract need not be performed

ಈ ಮೇಲ್ಕಂಡಂತೆ ಕಲಂ 62 ರಲ್ಲಿರುವ ಅಂಶಗಳನ್ನು ಅವಲೋಕಿಸಿದಾಗ ಸ್ಪಷ್ಟವಾಗುವುದೇನೆಂದರೆ, ಕರಾರಿನ ಉಭಯಪಕ್ಷಗಾರರು ಹೊಸ ಕರಾರಿಗೆ ಒಪ್ಪಿಕೊಂಡಲ್ಲಿ, ಅಥವಾ ಹಿಂದಿನ ಕರಾರು ರದ್ದತಿಗೆ ಒಪ್ಪಿಕೊಂಡಲ್ಲಿ ಅಥವಾ ಹಿಂದಿನ ಕರಾರರನ್ನು ಬದಲಾಯಿಸಿದ್ದಲ್ಲಿ, ಸದರಿ ಮೂಲ ಕರಾರನ್ನು ನೇರವೇರಿಸಲು ಬರುವುದಿಲ್ಲ ಎಂದು ತಿಳಿಸುತ್ತದೆ. ಪ್ರಸ್ತುತ ದಾವೆಯಲ್ಲಿ ವಾದಿಯು ಪಾಟೀ ಸವಾಲಿನಲ್ಲಿ ನುಡಿದಂತೆ ನಿಪಿ–1 ಪ್ರಶ್ನಿತ ಕರಾರಿನಲ್ಲಿರುವ ಪ್ರಮುಖ ಅಂಶಗಳು ಬದಲಾಗಿರುವುದನ್ನು ಮತ್ತು ಚಿತ್ತಾಗಿರುವುದನ್ನು ಒಪ್ಪಿಕೊಂಡಿರುತ್ತಾರೆ. ಆದುದರಿಂದ ಪ್ರಸ್ತುತ ದಾವೆಯಲ್ಲಿ ಹಾಜರುಪಡಿಸಿರುವ ನಿಪಿ–1 ಪ್ರಶ್ನಿತ ಕರಾರಿನಲ್ಲಿರುವ ಸಂಗತಿಗಳು ಪ್ರತಿವಾದಿಯ ಸೂಚನೆಯಿಂದ ಬದಲಾಯಿಸಲ್ಪಟ್ಟಿದ್ದವು ಎಂಬುವುದರ ಬಗ್ಗೆ ವಾದಿಯ ನಿಲುವು ಇರುವುದಿಲ್ಲ. ಅಲ್ಲದೆ ನಿಪಿ–1 ರಂತೆ ಪ್ರಶ್ನಿತ ಕರಾರು ಪತ್ರದಲ್ಲಿ ವಾದಿಯು ಅನೇಕ ಪ್ರಮುಖ ಸಂಗತಿಗಳನ್ನು ತನಗೆ ಅನುಕೂಲವಾಗುವಂತೆ ತಿದ್ದುಪಡಿಗೊಳಿಸಿರುವುದು ಕಂಡುಬಂದಿದ್ದು, ಆದುದರಿಂದಾಗಿ ಸದರಿ ಪ್ರಶ್ನಿತ ಕರಾರನ್ನು ಜಾರಿಗೊಳಿಸಲು ಅಥವಾ ನೆರವೇರಿಸಲು ಪ್ರತಿವಾದಿಯನ್ನು ವಾದಿಯು ಕೋರಿಕೊಳ್ಳಲು ಬರುವುದಿಲ್ಲ. ಹಾಗಾಗಿ ದಿನಾಂಕ 04.07.2007 ರಂದು ಪ್ರತಿವಾದಿಯು ದಾವಾ ಸ್ವತ್ತಿನ ಸಂಬಂಧ ನಿಪಿ–1 ರಂತೆ ದಾವಾ ಸ್ವತ್ತಿನ ಸಂಬಂಧ ಕ್ರಯದ ಕರಾರುಪತ್ರವನ್ನು ಜಾರಿಗೊಳಿಸಿದ್ದರು ಎಂಬುವುದನ್ನು ವಾದಿಯು ರುಜುವಾತುಪಡಿಸಿರುವುದಿಲ್ಲ. ಹಾಗಾಗಿ

KACM210003462020

ವಿವಾದಾಂಶ–1 ನ್ನು ನಕಾರಾತ್ಮಕವಾಗಿ ಉತ್ತರಿಸಲಾಗಿದೆ. ಅಲ್ಲದೇ ವಾದಿಯು ಹಾಜರುಪಡಿಸಿರುವ ದಿನಾಂಕ 04.07.2007 ರ ಪ್ರಶ್ನಿತ ಕ್ರಯ ಒಪ್ಪಂದ ಕರಾರು ಪತ್ರವು ಎಳ್ಳಷ್ಟೂ ಸಂಶಯವಿಲ್ಲದೆ ವಾದಿಯಿಂದ ತಿರುಚಲ್ಪಟ್ಟಿದೆ ಮತ್ತು ಸೃಷ್ಟಿಸಲ್ಪಟ್ಟಿದೆ ಎಂದು ಪ್ರತಿವಾದಿಯು ರುಜುವಾತುಪಡಿಸಿರುವುದರಿಂದ ವಾದಿಯು ದಾವೆಯಲ್ಲಿ ಕೋರಲಾದಂತೆ ಕರಾರಿನ ನಿರ್ಧಿಷ್ಟ ನೆರವೇರಿಕೆ ಪರಿಹಾರಕ್ಕೆ ಅರ್ಹರಿರುವುದಿಲ್ಲ. ಆದುದರಿಂದಾಗಿ ವಿವಾದಾಂಶ –2 ಮತ್ತು 3 ಅನ್ನು ನಕರಾತ್ಮಾಕವಾಗಿ ಉತ್ತರಿಸಲಾಗಿದೆ.

13. **ವಿವಾದಾಂಶ 4**:: ಈ ಮೇಲಿನ ವಿವಾದಾಂಶ–1 ರಿಂದ 3 ರಲ್ಲಿ ಚರ್ಚಿಸಿದ ಕಾರಣಕ್ಕಾಗಿ ಈ ಕೆಳಕಂಡಂತೆ ಆದೇಶಿಸಲಾಗಿದೆ.

## **ತೀರ್ಪು**

ವಾದಿಗಳ ದಾವೆಯನ್ನು ಖರ್ಚು ಸಹಿತ ವಜಾಗೊಳಿಸಲಾಗಿದೆ.

ಆದೇಶಕ್ಕನುಸಾರವಾಗಿ ಡಿಕ್ರಿ ಬರೆಯಲು ಸೂಚಿಸಲಾಗಿದೆ.

(ಈ ತೀರ್ಪನ್ನು ಶೀಘ್ರಲಿಪಿಗಾರರಿಗೆ ಗಣಕಯಂತ್ರದ ಮೂಲಕ ನೇರವಾಗಿ ಉಕ್ತಲೇಖನ ಕೊಟ್ಟು ಬೆರಳಚ್ಚು ಮಾಡಿದ ನಂತರ ನಾನು ಅದನ್ನು ಓದಿ, ತಪ್ಪುಗಳನ್ನು ತಿದ್ದಿ, ನಂತರ ಈ ದಿನ ಅಂದರೆ ದಿನಾಂಕ 01.07.2026 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಿರುತ್ತೇನೆ.)

Sd/-

**(ಮಂಜುನಾಥಚಾರಿ ಡಿ. ಕೆ.)**
1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ನ್ಯಾಯಾಲಯ, ಕಡೂರು.

KACM210003462020

## ಅನುಬಂಧಗಳ ಪಟ್ಟಿ

**1) ವಾದಿಯ ಪರ ವಿಚಾರಣೆಯಾದ ಸಾಕ್ಷಿದಾರರ ಪಟ್ಟಿಃ-**

ವಾ.ಸಾ -1 – ಶ್ರೀಮತಿ. ಬಿ.ವನಜಾಕ್ಷಿ.

**2) ವಾದಿಯ ಪರ ನಿಶಾನೆಯಾದ ದಾಖಲೆಗಳ ಪಟ್ಟಿಃ-**

ನಿಪಿ-1 – ಸರ್ವೆ ನಂ.34/3 ಪಿ ರ 217-18 ರ ಪಹಣಿ

ನಿಪಿ-2 – ದಿನಾಂಕ 04.07.2007 ರ ತಿರುವಳಿ ಹಾಗೂ ಕ್ರಯ ಒಪ್ಪಂದ ಕರಾರು

ನಿಪಿ-3 – ವಕೀಲರ ಮೂಲಕ ನೀಡಿದ ನೋಟಿಸಿನ ಕಛೇರಿ ಪ್ರತಿ

ನಿಪಿ-4 – ಅಂಚೆ ಸ್ವೀಕೃತಿ ಪತ್ರ.

**3) ಪ್ರತಿವಾದಿಗಳ ಪರ ವಿಚಾರಣೆಯಾದ ಸಾಕ್ಷಿದಾರರ ಪಟ್ಟಿಃ-**

ಪ್ರ.ಸಾ -1 – ಬಿ. ಮಹೇಂದ್ರ.

**4) ಪ್ರತಿವಾದಿಗಳ ಪರ ನಿಶಾನೆಯಾದ ದಾಖಲೆಗಳ ಪಟ್ಟಿಃ-**

ನಿಡಿ-1 – ವಿಶೇಷ ಮುಕ್ತ್ಯಾರ್ ನಾಮೆ ಪತ್ರ

ನಿಡಿ-2-3 – ಅಸಲು ದಾವಾ ಸಂಖ್ಯೆ 374/2018 ರ ವಾದ ಪತ್ರ ಮತ್ತು ಪ್ರತಿವಾದ ಪತ್ರದ ನಕಲು.

Sd/-

**(ಮಂಜುನಾಥಚಾರಿ ಡಿ.ಕೆ.)**
1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ನ್ಯಾಯಾಲಯ, ಕಡೂರು.

Visit **ecourts.gov.in** for updates or download mobile app “**eCourts Services**” from Android or iOS